**ಅಸಲು ದಾವಾ ನಂಃ 24 /2022**
**ಪಿ.ಡಬ್ಲ್ಯೂಃ 1, ಶೇಖಮ್ಮ**

ದಿನಾಂಕ :16-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ M V L / R V L, 3 ನೇ ಪ್ರತಿವಾದಿ ಪರ ವಕೀಲರಿಂದ

ನನ್ನ ಅಜ್ಜನ ಹೆಸರು ಸಾಬಣ್ಣ . ಸದರಿ ಸಾಬಣ್ಣ ಇವರಿಗೆ ರಾಮಣ್ಣ, ಭೀಮಣ್ಣ, ಕಾಂತಪ್ಪ ಮತ್ತು ಸುಮಂತ 4 ಜನ ಗಂಡು ಮಕ್ಕಳು ಅಂದರೆ ಸರಿ. ನಾವು ಈಗ ಕ್ರಿಶ್ಚಿಯನ ಧರ್ಮದ ಅನುಯಾಯಿಗಳಾಗಿದ್ದು ಚರ್ಚ ಗೆ ಹೋಗುತ್ತೆವೆ ಎಂದು ಸೂಚಿಸುವುದು ಸರಿ. ಸದರಿ ಸಾಬಣ್ಣ ಇವರಿಗೆ ಸ.ನ. 45, ಸ.ನ. 58 ಮತ್ತು ಸ.ನ. 59, ಮೂರು ಜಮೀನುಗಳು ಇದ್ದವು ಅಂದರೆ ಸಾಕ್ಷಿ ಇದ್ದಿರಬಹುದು ನನಗೆ ನಂಬರ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸದರಿ ಸ್ವತ್ತಿನಲ್ಲಿ ಸ.ನ. 45,ರಲ್ಲಿ 10 ಎಕರೆ, ಸ.ನ. 58 ರಲ್ಲಿ 11 ಎಕರೆ 03 ಗುಂಟೆ ಮತ್ತು ಸ.ನ. 59 ರಲ್ಲಿ 11 ಎಕರೆ 06 ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿ ಅದು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸದರಿ ಸ್ವತ್ತುಗಳಲ್ಲಿ ನನ್ನ ಅಜ್ಜ ಇವರು ರಾಮಣ್ಣ, ಭೀಮಣ್ಣ, ಕಾಂತಪ್ಪ ಮತ್ತು ಸುಮಂತ 4 ಜನರಿಗೆ ಸಮವಾಗಿ ಹಂಚಿಕೂಟ್ಟಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸದರಿ ವಿಭಾಗದಲ್ಲಿ ನನ್ನ ತಂದೆ ರಾಮಣ್ಣ ಇವರಿಗೆ ಸ.ನ. 58 ರಲ್ಲಿ 5 ಎಕರೆ 33 ಗುಂಟೆ ಮತ್ತು ಸ.ನ. 59 ರಲ್ಲಿ 1 ಎಕರೆ 22 ಗುಂಟೆ ಒಟ್ಟು 7 ಎಕರೆ 15 ಗುಂಟೆ ಬಂದಿತ್ತು ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

ಅದೇ ರೀತಿ ನನ್ನ ಅಜ್ಜ ಸಾಬಣ್ಣ ಇವರಿಗೆ ಸ.ನ. 32/1 ರಲ್ಲಿ 5 ಎಕರೆ 09 ಗುಂಟೆ ಮತ್ತು ಸ.ನ. 32/2 ರಲ್ಲಿ 8 ಎಕೆರ 35 ಗುಂಟೆ ಇದ್ದು ಅದನ್ನು ರಾಮಣ್ಣ, ಭೀಮಣ್ಣ, ಕಾಂತಪ್ಪ ಮತ್ತು ಸುಮಂತ 4 ಜನರ ಮಕ್ಕಳಿಗೆ ಅಂದರೆ ಮೊಮ್ಮಕ್ಕಳಿಗೆ ಸಮನಾಗಿ ತಲಾ 3 ಎಕರೆ 21 ಗುಂಟೆ ಹಂಚಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. ಸದರಿ ವಿಭಾಗದಲ್ಲಿ ರಾಜಣ್ಣ ತಂದೆ ಭೆಮಣ್ಣ ಇವರಿಗೆ ಸ.ನ. 32/1 ರಲ್ಲಿ 3 ಎಕರೆ 21 ಗುಂಟೆ, ಅಡಿವೇಪ್ಪ ತಂದೆ ಕಾಂತಪ್ಪ ಇವರಿಗೆ ಸ.ನ. 32/1 ರಲ್ಕಿ 1 ಎಕರೆ 28 ಗುಂಟೆ ಮತ್ತು ಸ.ನ. 32/2 ರಲ್ಲಿ 1 ಎಕರೆ 33 ಗುಂಟೆ, ಶಾಂತಪ್ಪ ತಂದೆ ರಾಮಣ್ಣ ಇವರಿಗೆ (ಪ್ರತಿವಾದಿ ನಂಃ3) ಸ.ನ. 32/2 ರಲ್ಲಿ 3 ಎಕರೇ 21 ಗುಂಟೆ ಮತ್ತು ವಿಜಯಕಮಾರ ತಂದೆ ಸುಮಂತೆ ಇವರಿಗೆ ಸ.ನ. 32/2 ರಲ್ಲಿ 3 ಎಕರೆ 21 ಗುಂಟೆ ಹಂಚಿ ಕೊಟ್ಟು ನೇರವಾಗಿ ಅವರವರ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಟ್ಟದ್ದರು ಎಂದರೆ ಸಾಕ್ಷಿ ಅದು ಸುಳ್ಳು ಎಂದು ಹೇಳುತ್ತಾರೆ.

ಸಿಮೆಂಟ ಕಂಪನಿಗೆ ಹೋಗಿರುವ ಜಮೀನುಗಳು ನನ್ನ ತಾಯಿ ಹೆಸರಿನಲ್ಲಿ ಇದ್ದವು ಎನ್ನುವುದು ಸರಿ. 4 ನೇ ಪ್ರತಿವಾದಿಯು ಇದೇ ಸ್ವತ್ತಗಳ ಬಗ್ಗೆ ಓಎಸ ನಂಃ 9/2016 ದಾವೆ ಸಲ್ಲಿಸಿದ್ದು ಅದರಲ್ಲಿ ನನಗೆ ನೋಟಿಸ ಜಾರಿ ಆಗಿದ್ದು ಆದರೂ ಸಹ ನಾನು ಹಾಜರು ಆಗಿಲ್ಲ ಎಂದರೆ ಸಾಕ್ಷಿ ಅದು ನನಗೆ ಯಾವುದು ಗೊತ್ತಿಲ್ಲ ಎಂದು ಹೇಳುತ್ತಾರೆ . 3 ನೇ ಪ್ರತಿವಾದಿಯು ನನ ಅಣ್ಣ ಅವರು ಸೇಡಂನಲ್ಲಿ ವಾಸವದತ್ತಾ ಸಿಮೆಂಟ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಅಲೇ ವಾಸ ಇದ್ದಾ ರೆ ಅಂದರೆ ಸರಿ. ಸದರಿಯವರು ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ ಮದುವೆ ಆದ ಮೇಲೆ ಅಲ್ಲೇ ವಾಸ ಇದ್ದಾರೆ ಎಂದು ಹೇಳುತ್ತಾರೆ. ಸದರಿ ನನ್ನ ತಾಯಿ ಹೆ ಸರಿಗೆಇ ದ್ದ ಜಮೀನು ಓರಿಯಂಟ ಕಂಪನಿಯವರು ಖರಿದಿ ಮಾಡಿದಾಗ ಹಣವನ್ನು ನನ್ನ ತಾಯಿ ಖಾತೆಗೆ ಜಮೆ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೂತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಹಣ ಈಗಲೂ ಸಹ ನನ್ನ ತಾಯಿ ಖಾತೆಯಲ್ಲಿ ಇದೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹಳುತ್ತಾರೆ. ಸದರಿ ಹಣವನ್ನು ನನ್ನ ತಾಯಿ ಮತ್ತು 3 ನೇ ಪ್ರತಿವಾದಿ ಇಬ್ಬರು ಹಂಚಿಕೊಂಡಿದ್ದಾರೆ ಎಂದು ನನ್ನ ಪ್ರಮಾಣ ಪತ್ರದ 3 ನೇ ಪ್ಯಾರಾದಲ್ಲಿ ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ಸದರಿ ಜಮೀನುಗಳು ಕಂಪನಿಗೆ ಹೂದಾಗ ನಾನು, ಸುಶೀಲಮ್ಮ ಮತ್ತು ಪಾರ್ವತಮ್ಮ ಮೂರು ಜನರು ನಮ್ಮ ನಮ್ಮ ಮಕ್ಕಳಿಗೆ ಕಂಪನಿಯಲ್ಲಿ ಕೆಲಸ ಕೋಡುವಂತೆ ಅರ್ಜಿಸಲ್ಲಿಸಿದ್ದೆವೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆಗ ಕಂಪನಿಯವರು ಒಬ್ಬರಿಗೆ ಮಾತ್ರ ಕೆಲಸ ಕೂಡುವದಾಗಿ ಹೇಳಿ ಶಾಂತಪ್ಪ ನ ಮಗನಿಗೆ ನೌಕರಿ ಕೊಟ್ಟಿದ್ದಾ ರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ನನ್ನ ತಾಯಿ ಖಾತೆಯಲ್ಲಿರುವ ಹಣವನ್ನು ನಾವು 3 ಜನ ಸೇರಿ ವಿತಡ್ರಾ ಮಾಡಿಕೊಂಡು ಬಳಸುತ್ತಿದ್ದೆವೆ ಅಂದೆರ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. ನಮ್ಮ ತಾಯಿ ಹಾಗೂ 2 ನೇ ಪ್ರತಿವಾದಿ ಇಬ್ಬರು ಇಟಗಾ ಗ್ರಾಮದಲ್ಲಿ ವಾಸ ಇದ್ದಾರೆ ಅಂದರೆ ಸರಿ. ನನ್ನ ತಂದೆ ಪಾಲಿಗೆ ಬಂದ ಸ್ವತ್ತು ಈಗಾಗಲೇ ಕಂಪನಿಗೆ ಹೋಗಿದ್ದು 3 ಎಕರೆ 21 ಗುಂಟೆ ಇದು ಶಾಂತಪ್ಪನ ಪಾಲಿಗೆ ಬಂದಿದ್ದು ಎಂದರೆ ಸಾಕ್ಷಿ ಇಲ್ಲಾ ನಮ್ಮ ತಂದ ಪಾಲಿಗೆ ಬಂದಿದ್ದು ಮಗನ ಹೆಸರಿಗೆ ಮಾಡಿದ್ದರು ಎಂದು ಹೇಳುತ್ತಾರೆ. ನನ್ನ ಅಜ್ಜ ಸಾಬಣ್ಣ ಇವರು ಸದರಿ 3 ಎಕರೆ 21 ಗುಂಟೆ ಜಮೀನನ್ನು 3 ನೇ ಪ್ರತಿವಾದಿ ಹೆ ಸರಿಗೆ ಮಾಡಿದ್ದು ಅವರೇ ಮಾಲಿಕರು ಎಂದರ ಸಾಕ್ಷಿ ಇಲ್ಲಾ ನನ್ನ ತಂದೆ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಇಟಗಾದಲ್ಲಿ ನನ್ನ ತಂದಗೆ ಇರುವ ಸ್ವಂತ ಮನೆಯಲ್ಲಿ ನನ್ನ ತಾಯಿ ಮತ್ತು 2 ನೇ ಪ್ರತಿವಾದಿ ವಾಸ ಇದ್ದಾರೆ ಅಂದರೆ ಸರಿ. ಕಂಪನಿಯವರು 2011 ರಲ್ಲಿ ಹೊಲ

ಖರಿದಿ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ವಿಚಾರ ಆವಾಗಲೇ ಗೊತ್ತಿತ್ತು ನಾವು ತಾಯಿ ಹತ್ತಿರ ಹಣ ಸಹ ಪಡೆದಿದ್ದವೆ ಎಂದು ಸೂಚಿಸುವುದು ಸರಿಯಲ್ಲ. 4 ನೇ ಪ್ರತಿವಾದಿ ಹಾಕಿದ ಓ ಎಸ 9/2016 ದಾವೆ ಯಲ್ಲಿ ನನಗೆ ನೋಟಸ ಜಾರಿ ಆಗಿದ್ದು ಗೊತ್ತಿದ್ದರು ಸಹ ಉದ್ದೇಶ ಪೂರ್ವಕವಾಗಿ ಹಾಜರು ಆಗಿಲ್ಲ ಎಂದು ಹೇಳುವುದು ಸರಿಯಲ್ಲ. 3 ನೆ ಪ್ರತಿವಾದಿಗೆ ಪಾಲಿನಲ್ಲಿ ಬಂದ ಸ.ನ. 32/2 ರಲ್ಲಿ ಹೊಲ ಹೊಡೆಯಬೇಕು ಮತ್ತು ಹಣ ಕಬಳಿಸಬೇಕು ಎಂದು ದುರದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇವೆ ಅಂದರೆ ಸರಿಯಲ್ಲ. ನನ್ನ ಅಜ್ಜ ತೀರಿಕೊಂಡು ಸುಮಾರು 30 ವರ್ಷಗಳ ಮೇಲಾಯಿತು. ನನ್ನ ತಂದೆ ತೀರಿಕೊಂಡು ಸುಮಾರು 25 ವರ್ಷಗಳು ಆಗಿರಬಹುದು ಎಂದು ಹೇಳುತ್ತಾರೆ. ನನ್ನ ಅಪ್ಪ ಮತ್ತು ಅಜ್ಜ ಇಬ್ಬರು ಕ್ರೈಸ್ತ ಧರ್ಮ ಪಾಲಕರು ಆಗಿದ್ದರು ಅಂದರೆ ಸರಿ. 3 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಹಾಕಿದ್ದೇನೆ ಅಂದರೆ ಸರಿಯಲ್ಲ.

ಪಾಟಿ ಸವಾಲುಃ **4** ಮತ್ತು **5** ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.